ಶ್ರೀ ಅಬ್ದುಲ್ ನಜೀರ್ ಸಾಬ್.— ಕೆಲವು ಕಡೆ ಇದು ದುರುಪಯೋಗವಾಗಿದೆ, ಅದಕ್ಕಾಗಿ ಎಲ್ಲಾ ಕಡೆ ಫಲಾನುಭವಿಗಳನ್ನು ಗುರುತಿಸುವಾಗ ಛಲ್ಲಾ ಮಟ್ಟದ ಅಧಿಕಾರಿಗಳು ಹೋಗಿ ಫಲಾನುಭವಿಗಳಿಗೆ ಏಮ್ಮೆ, ಹಸುಗಳನ್ನು ಕೊಡಿಸಿ ಈ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಇನ್ನೊಂದು ವಿಷಯವೆಂದರೆ, ಇದರ ಬಗ್ಗೆ ನಮಗೆ ಕಾನೂನಿನ ಬಲವಿಲ್ಲದ್ದರಿಂದ ಕಾನೂನನ್ನು ಕೂಡ ತರಬೇಕು ಎಂದು ಸರ್ಕಾರದ ಉದ್ದೇಶವಿದೆ.

ಶ್ರೀ ಆರ್. ಬಾಳೆಕುಂದರಗಿ.— ಮಾನ್ಯ ಮಂತ್ರಿಗಳು ಮಾತನಾಡುವಾಗ ಕತ್ತೆಗಳನ್ನು ಕೊಡುವುದಕ್ಕೆ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕ್ಷಮಿಸಬೇಕು, ಮಾತನಾಡುವ ಭರದಲ್ಲಿ ಆ ರೀತಿಯಾಗಿ ಹೇಳಿದೆ.

ಶ್ರೀ ಎಂ. ಬಿ. ನಾಯಕ್.— ಸರ್ಕಾರದವರು ಕುರುಬರಿಗೆ ಕುರಿಗಳನ್ನು ಕೊಟ್ಟಿದ್ದರೆ, ಕುರಿಗಳು ಇಲ್ಲ ದೊಡ್ಡ ರೈತರಿಗೆ, ಶ್ರೀಮಂತರಿಗೆ ಸಾಲವನ್ನು ಸರ್ಕಾರದವರು ಕೊಟ್ಟಿದ್ದಾರೆ. ಶ್ರೀಮಂತರಿಗೆ ಸಹಾಯವನ್ನು ಮಾಡುವುದನ್ನು ನಿಲ್ಲಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಮಾನ್ಯ ಸದಸ್ಯರು ಇದರ ಬಗ್ಗೆ ವಿವರಗಳನ್ನು ಕೊಟ್ಟರೆ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.— ಕೆಲವು ಕಡೆಗಳಲ್ಲಿ ಈ ಸಹಾಯಧನವನ್ನು ಶ್ರೀಮಂತರೇ ಪಡೆದು ಕೊಂಡಿದ್ದಾರೆ, ಶ್ರೀಮಂತರಿಗೆ ಸಹಾಯ ಮಾಡಿದಂಥ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಇಂಥಿಂಥ ಕ್ಷೇತ್ರದಲ್ಲಿ ಈ ರೀತಿಯಾಗಿದೆ ಎಂದು ಹೇಳಿದರೆ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮುನಿಯಪ್ಪ — ಹಸು ಏಮ್ಮೆಗಳನ್ನು ಕೊಡುವಾಗ ಸರ್ಕಾರದವರು ಇನ್ಷೂರೆನ್ಸ್ ಮಾಡಿಸುತ್ತಾರೆ. ಆದರೂ ಸಹ ಮೂರು ತಿಂಗಳಾದ ಮೇಲೆ ಆ ಏಮ್ಮೆ ಸತ್ತು ಹೋಯಿತು ಎಂದು ಮತ್ತೆ ಸಾಲವನ್ನು ತೆಗೆದ ಕೊಳ್ಳುತ್ತಾರೆ. ಇಂಥ ಕೇಸುಗಳು ಸರಕಾರದ ಗಮನಕ್ಕೆ ಬಂದಿವೆಯೇ ? ಬಂದಿದ್ದರೆ ಅವರ ಮೇಲೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಅಲ್ದುಲ್ ನಜೀರ್ ಸಾಬ್. — ಮಾನ್ಯ ಸದಸ್ಯರು ಇಂಥ ಕಡೆ ಹೀಗೆ ಆಗಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಅದನ್ನು ನಾನು ತನಿಖೆ ಮಾಡಿಸಿ ನಂತರ ಉತ್ತರವನ್ನು ಹೇಳಬಲ್ಲೆ.

ವಿಷಯ : ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ವಸತಿ ಸೌಲಭ್ಯಗಳು.

ಪ್ರಶ್ನೆ 209(330) ಶ್ರೀ ಕೆ. ಚೆನ್ನಬಸವನಗೌಡ (ಕೊಡ್ಲಿಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಂಗಭದ್ರಾ ಬೋರ್ಡಿನಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಉಚಿತ ವಸತಿ ನೀಡಿರುವಂತೆ ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಸಹಾ ಉಚಿತ ವಸತಿಯನ್ನು ಸರ್ಕಾರದವರು ಕಲ್ಪಿಸುವರೆ ;

ಆ) ಮೇಲಿನ ಕಾಲೋನಿಯಲ್ಲಿ ಕೆಲಸ ಮಾಡುವ ನೌಕರರಿಗೆ ಆಯಾ ಇಲಾಖೆಯವರು ಮೇಲಿನ ಅನುಕೂಲತೆ ಮಾಡಲು ಸರ್ಕಾರಿ ಆದೇಶ ಹೊರಡಿಸಿರುವಂತೆ ಶಿಕ್ಷಣ ಇಲಾಖೆಯವರು ಕೂಡ ತಮ್ಮ ಶಿಕ್ಷಕರಿಗೆ ಅನುಕೂಲತೆ ಮಾಡಲು ಸರ್ಕಾರದವರು ಆದೇಶ ಹೊರಡಿಸಿರುವುದು ನಿಜವೆ ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಮತ್ತು ಆ) ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಬೇರೆ ಇಲಾಖೆಯವರಿಗೆ ಉಚಿತ ವಸತಿಯನ್ನು ಕಲ್ಪಿಸಿಕೊಟ್ಟ ಬಗ್ಗೆ ವಿವರಗಳನ್ನು ಪಡದು ಈ ವಿಷಯದಲ್ಲಿ ಶಿಕ್ಷಕರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಚನ್ನಬಸವನಗೌಡ.— ಸ್ವಾಮಿ, ಬೇರೆ ಬೇರೆ ಇಲಾಖೆಯವರಿಗೂ ಕೊಟ್ಟು; ಶಿಕ್ಷಣ ಇಲಾಖೆಯವರಿಗೆ ಕೊಡದೇ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, 1-1-86 ರಲ್ಲಿ ಅಲ್ಲಿನ ಪ್ರೌಢ ಶಾಲೆಯನ್ನು ಸರ್ಕಾರದ ವಶಕ್ಕೆ ತೆಗೆದ ಕೊಳ್ಳಲಾಗಿದೆ. ಈ ವಿಚಾರದಲ್ಲಿ ವಿವರವಾದ ಮಾಹಿತಿಯನ್ನು ತರಿಸಿ, ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವಂಥ ಉಪಾಧ್ಯಾಯರಿಗೂ ವಸತಿಗಳನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ. ಚನ್ನಬಸವನಗೌಡ.— ಸರ್ಕಾರದ ಆಜ್ಞೆ ಪ್ರಕಾರ ಕೊಟ್ಟಿದ್ದೇವೆಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ; ಸರ್ಕಾರದ ಆಜ್ಞೆಯಲ್ಲಿ ಶಿಕ್ಷಣ ಇಲಾಖೆಯ ನೌಕರರಿಗೂ ಕೊಡುವಂಥ ವ್ಯವಸ್ಥೆ ಏತಕ್ಕೆ ಮಾಡಿಲ್ಲ ?

ಶ್ರೀ ಬಿ ರಾಚಯ್ಯ. — 50 ಮಂದಿ ಉಪಾಧ್ಯಾಯರುಗಳ ಪೈಕಿ 13 ಮಂದಿಗೆ ಉಚಿತ ವಸತಿ ಕೊಟ್ಟಿದ್ದಾರೆ. ಇರತಕ್ಕ ವಿಚಾರಗಳನ್ನು ವಿಮರ್ಶೆ ಮಾಡಿ; ಬೇರೆಯವರಿಗೂ ಅವಕಾಶ ಕೊಟ್ಟಿದ್ದರೆ ನಮ್ಮ ಉಪಾಧ್ಯಾಯರಿಗೂ ವಸತಿ ಸೌಕರ್ಯ ಒದಗಿಸಿಕೊಡಿ ಎಂದು ಪತ್ರ ಬರೆಯುತ್ತೇನೆ.

ಶ್ರೀ ಎಲ್. ಟಿ ತಿಮ್ಮಪ್ಪ ಹೆಗಡೆ. — ಪ್ರಾಜೆಕ್ಟ್‌ಗಳಲ್ಲಿ ವಿಶೇಷವಾದ ಪರಿಸ್ಥಿತಿ ಇರುತ್ತದೆ. ಅದು ತುಂಗಭದ್ರಾ ಪ್ರಾಜೆಕ್ಟ್ ಇರಬಹುದು; ಶರಾವತಿ ಪ್ರಾಜೆಕ್ಟ ಇರಬಹುದು; ವರಾಹಿ ಪ್ರಾಜೆಕ್ಟ್ ಇರಬಹುದು; ಶಿಕ್ಷಕರಿಗೆ ವಸತಿ ಗೃಹಗಳನ್ನ ಒದಗಿಸಿಕೊಡುವುದು ಸರ್ಕಾರದ ಜವಾಬ್ದಾರಿ. ಈ ವಿಚಾರದಲ್ಲಿ ಯೋಜನೆಗೆ ಸಂಬಂಧಪಟ್ಟವರೊಂದಿಗೆ ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ. — ಇದಕ್ಕೆ ಮೊದಲೇ ಉತ್ತರ ಹೇಳಿದ್ದೇನೆ.

ವಿಷಯ : ಕುಂದಾಪುರ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಗ್ರಾಮೀಣ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ.

ಪ್ರಶ್ನೆ. 210 (270) ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) ಮಾನ್ಯ ಪಶುಸಂಗೋಪನ ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರ – ಉಡುಪಿ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಲ್ಲಿ ಎಷ್ಟು ಹಳ್ಳಿಗಳಿಗೆ ಗ್ರಾಮೀಣ ಪಶುವೈದ್ಯ ಆಸ್ಪತ್ರೆ ಕೇಂದ್ರಗಳು ಮಂಜೂರಾಗಿವೆ ;

ಆ) ಮಂಜೂರಾಗಿದ್ದು ಕಾರ್ಯ ನಿರ್ವಹಿಸದೇ ಇರುವ ಪಶುವೈದ್ಯ ಕೇಂದ್ರಗಳು ಇವೆಯೇ ;

ಇ) ಹಾಗಿದ್ದರೆ ಅವುಗಳು ಕಾರ್ಯ ನಿರ್ವಹಿಸದಿರಲು ಕಾರಣವೇನು ?

ಉತ್ತರ : ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು) (ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ ಪಶುಸಂಗೋಪನೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ).—

ಅ)	ಕುಂದಾಪುರ	2	1979-80 ರಲ್ಲಿ
	ಉಡುಪಿ	2	1982 83 ರಲ್ಲಿ
	ಒಟ್ಟು	4	

ಮೇಲ್ಕಂಡಂತೆ ಐದು ವರ್ಷಗಳಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಗಳು ಮಂಜೂರಾಗಿವೆ.

ಆ) ಈ ಎಲ್ಲಾ ನಾಲ್ಕು ಗ್ರಾಮೀಣ ಪಶುವೈದ್ಯ ಶಾಲೆಗಳು ಕಾರ್ಯ ನಿರ್ವಹಿಸುತ್ತಿಲ್ಲ.

ಇ) ಹುದ್ದೆಗಳ ಮಂಜೂರಾತಿಯಿಲ್ಲದ ಹಾಗೂ ತಾಂತ್ರಿಕ ಸಿಬ್ಬಂದಿಯ ಕೊರತೆಯ ಕಾರಣಗಳಿಂದಾಗಿ ಈ ಗ್ರಾಮೀಣ ಪಶುವೈದ್ಯ ಶಾಲೆಗಳು ಕಾರ್ಯ ನಿರ್ವಹಿಸುತ್ತಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ. — ಮಾನ್ಯ ಅಧ್ಯಕ್ಷರೇ, ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನಲ್ಲಿ ಮಂಜೂರಾದ ಪಶುವೈದ್ಯ ಶಾಲೆಗಳು ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಇರುವುದಕ್ಕೆ ಕಾರಣವೇನು? ಯಾವಾಗಿನಿಂದ ಕಾರ್ಯ ನಿರ್ವಹಿಸುತ್ತವೆ ?

ಶ್ರೀ ಎಂ. ಪಿ. ಪ್ರಕಾಶ್. — ಸನ್ಮಾನ್ಯ ಅಧ್ಯಕ್ಷರೇ, 1979-80 ರಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಎರಡು ಗ್ರಾಮಗಳಿಗೂ; ಉಡುಪಿ ತಾಲ್ಲೂಕಿನಲ್ಲಿ ಎರಡು ಗ್ರಾಮಗಳಿಗೂ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದ್ದರೂ, ಸಿಬ್ಬಂದಿ ನೇಮಕಾತಿಗೆ ಮಂಜೂರಾತಿ ದೊರಕದಿರುವುದರಿಂದ ಅವುಗಳು ಕಾರ್ಯ ಪ್ರಾರಂಭ ಮಾಡಿಲ್ಲ. 1982-83 ರಲ್ಲಿ ಸರಿಯಾದಂಥ ಸಿಬ್ಬಂದಿ ಅನುಕೂಲಕ್ಕಾಗಿ 2 ತರಬೇತಿ ಕೇಂದ್ರಗಳನ್ನು ಮಂಜೂರು ಮಾಡಿದ್ದು, ತಾಂತ್ರಿಕ ಸಿಬ್ಬಂದಿ ದೊರಕಿದ ಕೂಡಲೇ ಪ್ರಾರಂಭ ಮಾಡುತ್ತೇವೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ. — ಸದರಿ ಗ್ರಾಮಗಳಿಗೆ ಸಂಚಾರಿ ಪಶುವೈದ್ಯ ವಾಹನವನ್ನು ಕಳುಹಿಸಿ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್. — ಈ ಪ್ರಶ್ನೆ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ; ಮಾನ್ಯ ಸದಸ್ಯರ ಸಲಹೆ ಯೋಗ್ಯವಾಗಿರುವುದರಿಂದ ಪರಿಶೀಲನೆ ಮಾಡಲಾಗುವುದು.

ಶ್ರೀ ಹನುಮಂತರಾಯಪ್ಪ. — ಸ್ವಾಮಿ, ಪಶುವೈದ್ಯ ಶಾಲೆಗಳಲ್ಲಿ ವೈದ್ಯರು ಇರುವುದಿಲ್ಲ; ಸ್ಟಾಕ್ ಮ್ಯಾನುಗಳು ಇರುವುದಿಲ್ಲ; ಜವಾನರು ಮತ್ತು ಅಟೆಂಡರುಗಳನ್ನು ಹಾಕುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್. — ಸ್ವಾಮಿ, 1979-80 ರಲ್ಲಿ ರಾಜಕೀಯ ಕಾರಣಕ್ಕಾಗಿ ಸರಿಯಾದಂಥ ತಾಂತ್ರಿಕ ಸಿಬ್ಬಂದಿ ಇಲ್ಲದೇ ಇದ್ದರೂ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದರು. ಇವತ್ತು ತಾಂತ್ರಿಕ ಸಿಬ್ಬಂದಿಯ ಅವಶ್ಯಕತೆ ಇರುವುದರಿಂದ 24 ತರಬೇತಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದೇವೆ. ಸಿಬ್ಬಂದಿ ದೊರಕಿದ ಕೂಡಲೇ ಎಲ್ಲಾ ಪಶುವೈದ್ಯ ಶಾಲೆಗಳು ಪ್ರಾರಂಭವಾಗುವವು.